**O.S.101/2019** **ಪಿ.ಡಬ್ಲೂಃ 6**

ಸಾಕ್ಷಿಯನ್ನು ದಿಃ **16.07.2022** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎಂ.ಇ.ಪಿ ವಕೀಲರಿಂದಃ-

ಈ ಹಿಂದೆ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನನ್ನ ತಂದೆಯ ಹೆಸರು ಚಿಕ್ಕ ಬೈರಯ್ಯ ಎನ್ನುವ ಬದಲು ಚಿಕ್ಕ ಬೋರಯ್ಯ ಎಂದಾಗಿದ್ದ ಕಾರಣ ಇಂದು ಅಧಿಕ ಹೇಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.

ಪಾಟೀ ಸವಾಲುಃ **2** ನೇ ಪ್ರತಿವಾದಿ ಪರ ಶ್ರೀ ಎಂ.ಬಿ. ವಕೀಲರಿಂದಃ

ನಾನು ವಿಧ್ಯಾಭ್ಯಾಸ ಮಾಡಿಲ್ಲ. ನಮ್ಮ ತಾತನಿಗೆ **3** ಜನ ಮಕ್ಕಳು ಅವರುಗಳೆಂದರೆ ಬೋರಮ್ಮ, ಬಿ.ಸಿದ್ದಯ್ಯ ಮತ್ತು ಇನ್ನೊಬ್ಬರು ನನ್ನ ತಂದೆ ಚಿಕ್ಕ ಬೈರಯ್ಯ. ಬಿ.ಸಿದ್ದಯ್ಯ ಪೊಲೀಸ್ ಕೆಲಸ ಮಾಡುತ್ತಿದ್ದರು. ಬಿ.ಸಿದ್ದಯ್ಯನವರು ಮೈಸೂರಿನ ಜ್ಯೋತಿನಗರದಲ್ಲಿ ಕೆಲಸ ಮಾಡುತ್ತಿದ್ದರು. ಈ ದಾವಾದಲ್ಲಿ ಸಾಕ್ಷಿ ನುಡಿದಿರುವ ಪಿ.ಡಬ್ಲೂ **4** ಸಿದ್ದಲಿಂಗಸ್ವಾಮಿ ರವರು ಬಿ.ಸಿದ್ದಯ್ಯನವರ ಅಳಿಯ ಎಂದರೆ ಸರಿ. ಈ ಸಿದ್ದಲಿಂಗಸ್ವಾಮಿ ರವರ ಮಗಳು ಪೂರ್ಣಿಮಾ ರವರಿಗೆ ಈ ದಾವಾದ **3** ನೇ ವಾದಿಯಾದ ರವಿಯವರಿಗೆ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿ. ನನ್ನ ಸೋದರತ್ತೆ ಬೋರಮ್ಮ ರವರ ಮೊಮ್ಮಗಳು ಪಾರ್ವತಿಯವರನ್ನು ಈ ದಾವಾದ **2** ನೇ ಯವಗೆ ಲಗ್ನ ಮಾಡಿದ್ದಾರೆ ಎಂದರೆ ಸರಿ.

ನಾನು ಹುಟ್ಟಿದ ದಿನಾಂಕ ನನಗೆ ಗೊತ್ತಿಲ್ಲ. ನನ್ನ ಮದುವೆಯು ದಿಃ **22.11.1989** ರಲ್ಲಿ ಆಗಿದೆ. **1** ನೇ ವಾದಿ ನಿಂಗಮ್ಮನವರ ಮದುವೆ **1976** ರಲ್ಲಿ **21** ನೇ ತಾರೀಕಿನಂದು ಆಗಿದ್ದು, ಅದು ಯಾವ ತಿಂಗಳು ಎಂದು ನೆನಪಿಲ್ಲ. ನನಗೆ **3** ಜನ ಮಕ್ಕಳು. ಅವರುಗಳ ಪೈಕಿ ಇಬ್ಬರ ಮದುವೆಯಾಗಿದೆ. ನನ್ನ ಮಗ ನಾಗಭೂಷಣನ ಮದುವೆ ಈಗೆ **2** ವರ್ಷಗಳ ಹಿಂದೆ ಆಗಿದೆ ದಿನಾಂಕ ನೆನಪಾಗುತ್ತಿಲ್ಲ. ಮಗಳ ಮದುವೆ ಈಗ್ಗೆ **5-6** ವರ್ಷಗಳ ಹಿಂದೆ ನಡೆದಿದೆ ನಿಖರವಾಗಿ ದಿನಾಂಕ ನೆನಪಿಲ್ಲ.

ನಾನು ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿದ್ದೆ. ನಾನು ಯಲಚನಹಳ್ಳಿ ಮತ್ತು ಸೋನಹಳ್ಳಿ ಇಂದ ಸಿಂಗಮಾರನಹಳ್ಳಿ ಗ್ರಾಮ ಪಂಚಾಯಿತಿ ಚುನಾವಣೆಗೆ ನಿಂತಿದ್ದೆ ಎಂದರೆ ಸರಿ. ನಾನು ಕರೀಮುದ್ದನಹಳ್ಳಿ ವಿ.ಎಸ್.ಎಸ್.ಎನ್ ಸಂಘದ ಸದಸ್ಯ ಎಂದರೆ ಸರಿಯಲ್ಲ. ಅದೇ ರೀತಿ ನಾನು ಜನತಾ ದಳದ ಸಕ್ರಿಯ ಕಾರ್ಯಕರ್ತ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಭೈರೇಶ್ವರ ದೇವಸ್ಥಾನ ಇದೆ ಎಂದರೆ ಸರಿ. ಊರಿನಿಂದ ದೇವಸ್ಥಾನಕ್ಕೆ ನಮ್ಮ ಜಮೀನಿನ ಮೂಲಕ ಹೋಗಬೇಕು ಎಂದರೆ ಸರಿ. ನನ್ನ ಜಮೀನಿನಲ್ಲಿ ರಸ್ತೆ ಬಿಡುವುದಿಲ್ಲ ಎಂದು ನಾನು ಗ್ರಾಮಸ್ಥರು ಮತ್ತು ಗ್ರಾಮದ ಮುಖಂಡರ ವಿರುದ್ಧ ಅಸಲು ದಾವೆ ಸಂಖ್ಯೆ **218/2002** ರಲ್ಲಿ ದಾವೆ ಹೂಡಿದ್ದೆ ಎಂದರೆ ಸರಿ. ಸದರಿ ದಾವೆ ನನ್ನ ವಿರುದ್ಧ ಆಗಿದೆ ಎಂದರೆ ಸರಿಯಲ್ಲ ನನ್ನಂತೆ ಆಗಿದೆ. ನನ್ನ ದಾವೆ ವಜಾ ಆದ ನಂತರ ಈ ನ್ಯಾಯಾಲಯದಲ್ಲಿ ಆರ್.ಎ **145/2005** ರಂತೆ ಅಪೀಲು ಸಲ್ಲಿಸಿದ್ದೆ ಎಂದರೆ ದಾವೆ ನನ್ನಂತೆ ಆಗಿತ್ತು, ಅಪೀಲು ಏಕೆ ಹಾಕಬೇಕು ಎನ್ನುತ್ತಾರೆ. ಸದರಿ ಬೈರೇಶ್ವರ ದೇವಸ್ಥಾನಕ್ಕೆ ಓಡಾಡಲು ರಸ್ತೆಗಾಗಿ **2** ನೇ ಪ್ರತಿವಾದಿ ತಮ್ಮ ಜಮೀನಿನಲ್ಲಿ ಜಾಗ ಬಿಟ್ಟಿದ್ದಾರೆ ಎಂದರೆ ಸರಿಯಲ್ಲ.

**1** ನೇ ವಾದಿಯ ಮದುವೆ ಜ್ಯೋತಿನಗರದ ಆಂಜನೇಯ ದೇವಸ್ಥಾನದಲ್ಲಿ ಆಗಿತ್ತು.ಈ ರೀತಿ ಆಂಜನೇಯ ದೇವಸ್ಥಾನದಲ್ಲಿ ಮದುವೆ ಆಗಿರುವುದಕ್ಕೆ ಲಗ್ನ ಪತ್ರಿಕೆ ಮಾಡಿರುಸಿರುವುದಿಲ್ಲ. ಮದುವೆಗೆ ಪುರೋಹಿತರಾಗಿ ನಮ್ಮ ಗ್ರಾಮದ ಪೂಜಾರಿ ರಾಚಯ್ಯನವರು ಬಂದಿದ್ದರು. ಸದರಿ ದೇವಸ್ಥಾನದಲ್ಲಿ ಇಂತಿಂತವರು ಇಂತಿಂತಹ ದಿನ ಮದುವೆ ಆಗುತ್ತಿದ್ದಾರೆ ಎಂದು ನೋಂದಣಿ ಆಗಿರಲಿಲ್ಲ. ಮದುವೆಗೆ ಸುಮಾರು **50-60** ಜನ ಸೇರಿದ್ದರು. ಅವರುಗಳ ಪೈಕಿ ನಮ್ಮ ಗ್ರಾಮದವರು ಗೊತ್ತು, ಅಕ್ಕ ಪಕ್ಕದ ಗ್ರಾಮದವರ ಹೆಸರು ಗೊತ್ತಿಲ್ಲ. ಜ್ಯೋತಿನಗರದ ಆಂಜನೇಯ ದೇವಸ್ಥಾನ ಆಗ ಮುಜರಾಯಿ ಇಲಾಖೆಗೆ ಸೇರಿರಲಿಲ್ಲ. ನಾನು ಹೇಳಿದಂತೆ ಜ್ಯೋತಿನಗರದಲ್ಲಿ ಆಂಜನೇಯ ದೇವಸ್ಥಾನ ಎಂಬುದು ಇರಲಿಲ್ಲ ಎಂದರೆ ಸರಿಯಲ್ಲ. ಆಂಜನೇಯ ದೇವಸ್ಥಾನ ಇತ್ತು ಎಂಬ ಬಗ್ಗೆ ದಾಖಲೆ ಇರುವುದಿಲ್ಲ. ನನ್ನ ದೊಡ್ಡಪ್ಪ ಬಿ. ಸಿದ್ದಯ್ಯನವರೊಂದಿಗೆ **1** ನೇ ವಾದಿಯವರ ಮದುವೆ ಆಗಿತ್ತು ಎಂದರೆ ಸರಿಯಲ್ಲ. ಯಲಚನಹಳ್ಳಿಯ ಸರ್ವೆ ನಂ. **16/1** ರಲ್ಲಿ ಬಿ. ಸಿದ್ದಯ್ಯನವರಿಗೆ **6** ಎಕರೆ **16** ಗುಂಟೆ ಜಮೀನು ಇತ್ತು ಎಂದರೆ ಸರಿ. ಈ **6** ಎಕರೆ **16** ಗುಂಟೆ ಜಮೀನು ಬಿ. ಸಿದ್ದಯ್ಯನವರಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಬಿ. ಸಿದ್ದಯ್ಯನವರಿಗೆ ಆಗಿರಲಿಲ್ಲ ನನ್ನ ತಾತನಿಗೆ ಮಂಜೂರಾಗಿತ್ತು. ಸದರಿ ಜಮೀನನ್ನು ದಿಃ **22.04.1987** ರಲ್ಲಿ ಬಿ. ಸಿದ್ದಯ್ಯನವರು ಮಾರಾಟ ಮಾಡಿದರು ಎಂದರೆ ಸರಿ. ಬಿ. ಸಿದ್ದಯ್ಯನವರಿಗೆ ದುಷ್ಚಟಗಳಿದ್ದ ಕಾರಣ ಸದರಿ ಜಮೀನುಗಳನ್ನು ಅವರು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಬಿ. ಸಿದ್ದಯ್ಯನವರ ಹೆಂಡತಿ ಹೆಸರು ದೇವಮ್ಮ ಎಂದರೆ ಸರಿ. ಅವರಿಗೆ ಒಬ್ಬ ಮಗ, ಒಬ್ಬ ಮಗಳು ಇದ್ದರೆ ಎಂದರೆ ಸರಿ. ಅವರ ಮಗಳ ಹೆಸರು ಎಸ್. ಶಿವಕುಮಾರಿ ಮತ್ತು ಮಗನ ಹೆಸರು ಸಿದ್ದರಾಜು ಎಂದರೆ ಸರಿ. ಸಿದ್ದರಾಜು ರವರು ಪೌತಿಯಾಗಿದ್ದರು ಎಂದರೆ ಸರಿ. ಆನಂತರ ಸಿದ್ದರಾಜು ರವರ ಹೆಂಡತಿ, ಮಕ್ಕಳು ಅವರ ತಂಗಿ ಎಸ್. ಶಿವಕುಮಾರಿ ಮತ್ತು ಸಿದ್ದಯ್ಯನವರ ಹೆಂಡತಿ

ದೇವಮ್ಮನವರು ಸದರಿ ಜಮೀನು ಮರು ಮಂಜೂರಾತಿ ಕೋರಿ ಸಿ. ಸುರೇಶ್ ಬಾಬು ಎಂಬುವವರ ವಿರುದ್ಧ ಪಿಟಿಸಿಯಲ್ ಸಿ.ಆರ್. ನಂಬರ್ **9/2006-2007** ರಂತೆ ಎಸಿ ರವರ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ.

**1** ನೇ ವಾದಿ ನಿಂಗಮ್ಮನವರು ನನ್ನ ದೊಡ್ಡಪ್ಪ ಬಿ. ಸಿದ್ದಯ್ಯನವರೊಂದಿಗೆ ವಿವಾಹವಾಗಿದ್ದರು. ಸದರಿ ವಿವಾಹದಿಂದ ವಾದಿ **2** ರಿಂದ **4** ರವರು ಜನಿಸಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿ **1** ರಿಂದ **4** ರವರ ತಂದೆ ಸಿದ್ದಯ್ಯ, ಈ ಸಿದ್ದಯ್ಯ ನವರ ಹೆಂಡತಿ ಪುಟ್ಟಗೌರಮ್ಮ. ಪುಟ್ಟಗೌರಮ್ಮನವರಿಂದ ಪ್ರತಿವಾದಿಗಳು ಜನಿಸಿದ್ದಾರೆ ಎಂದರೆ ಸಾಕ್ಷಿ ಪುಟ್ಟಗೌರಮ್ಮ ಸಿದ್ದಯ್ಯ ನವರ **1** ನೇ ಹೆಂಡತಿ, ಈ ದಾವಾದ **1** ನೇ ವಾದಿ ಸದರಿ ಈ ಸಿದ್ದಯ್ಯ ನವರ **2** ನೇ ಹೆಂಡತಿ ಎನ್ನುತ್ತಾರೆ. ಮೇಲೆ ಹೇಳಿದಂತೆ ಸರ್ವೆ ನಂ. **16/1** ರ **6** ಎಕರೆ **16** ಗುಂಟೆ ಜಮೀನಿನಲ್ಲಿ ನನ್ನ ದೊಡ್ಡಪ್ಪ ಬಿ.ಸಿದ್ದಯ್ಯ ನವರ **2** ನೇ ಹೆಂಡತಿ ಮತ್ತು ಮಕ್ಕಳಾದ ವಾದಿಗಳಿಗೆ ಭಾಗ ಹೋಗುತ್ತಿದೆ ಎಂಬ ಉದ್ದೇಶದಿಂದ ಈ ದಾವೆಯನ್ನು ಹೂಡಲಾಗಿದೆ ಎಂದರೆ ಸರಿಯಲ್ಲ. ದಾವಾ ಐಟಂ. **1** ಮತ್ತು **2** ರ ಸ್ವತ್ತುಗಳು ಯಾರಿಂದ ಬಂತು ಮತ್ತು ಹೇಗೆ ಬಂತು ಎಂದು ತಿಳಿದುಕೊಂಡಿದ್ದಿರಾ ಎಂದರೆ ಅದು ದರಖಾಸ್ತು ಇಂದ ಬಂದಿದೆ ಎನ್ನುತ್ತಾರೆ. ಈ ದಾವಾ ಐಟಂ. **1** ಮತ್ತು **2** ರ ಸ್ವತ್ತುಗಳು ಪೈಕಿ ಸಿದ್ದಯ್ಯನವರ ಅಣ್ಣ ತಮ್ಮಂದಿರಿಗೆ ಎಷ್ಟೆಷ್ಟು ಭಾಗ ಹೋಗಿದೆ ಎಂದು ನನಗೆ ಗೊತ್ತು.

ದಾವಾ ಐಟಂ ನಂ. **3** ಸಿದ್ದಯ್ಯನವರಿಗೆ ದರಖಾಸ್ತಿನಿಂದ ಬಂದಿದೆ. ಈ ಐಟಂ ನಂ. **3** ರ ಸ್ವತ್ತು ಪ್ರತಿವಾದಿಯರಿಗೆ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಅದರೆ ವಾದಿಯರಿಗೆ ಮೋಸ ಮಾಡಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಈ ರೀತಿ ಮೋಸದಿಂದ ಖಾತೆ ಮಾಡಿಕೊಂಡಿದ್ದಾರೆ ಎಂದು ಪ್ರತಿವಾದಿಗಳ ವಿರುದ್ಧ ವಾದಿಯವರು ಯಾವ ಕಾನೂನು ಕ್ರಮ ಕೈಗೊಂಡಿದ್ದಾರೆ ಎಂದರೆ ಈ ದಾವೆ ಹಾಕಿದ್ದಾರೆ. ಈ ಪ್ರತಿವಾದಿಯವರ ಮತ್ತು ಅವರ ತಾಯಿ ಪುಟ್ಟಗೌರಮ್ಮ ನವರು ಹಕ್ಕು ಘೋಷನೆ ಮತ್ತು ಪ್ರತಿಬಂಧಕಾಜ್ಞೆ ಕೋರಿ ಅಸಲು ದಾವೆ ಸಂಖ್ಯೆ **110/2005** ರಲ್ಲಿ ಇದೆ ನ್ಯಾಯಾಲಯದಲ್ಲಿ ದೊಡ್ಡಸಿದ್ದಯ್ಯ ಮತ್ತು ಕುಳ್ಳಬೋರಯ್ಯ ನವರ ವಿರುದ್ಧ ದಾವೆ ಹೂಡಿದ್ದರು ಎಂದರೆ ಗೊತ್ತಿಲ್ಲ. ಆಗ ನ್ಯಾಯಾಲಯವು ಇದೆ ಸರ್ವೆ ನಂ. **14/4** ರಲ್ಲಿ ಮತ್ತು ಐಟಂ ನಂ. **4** ರ ಸರ್ವೆ ನಂ. **18** ರ ಸ್ವತ್ತುಗಳು ಈ ಪ್ರತಿವಾದಿಗಳಿಗೆ ಸೇರಿದೆ ಎಂದು ಹಕ್ಕು ಘೋಷನೆ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಕ್ಕು ಘೋಷನೆ ಮತ್ತು ಪ್ರತಿಬಂದಕಾಜ್ಞೆ ಆದೇಶದ ಮೇರೆಗೆ ಈ ಪ್ರತಿವಾದಿಗಳ ಹೆಸರಿಗೆ ದಾವಾ ಐಟಂ ನಂ. **3** ಮತ್ತು **4** ರ ಖಾತೆ ಬದಲಾವಣೆ ಆಗಿದೆ ಎಂದರೆ ಅದು ನನಗೆ ಗೊತ್ತಿಲ್ಲ ಆದರೆ ಅವರು ಮೋಸದಿಂದ ಖಾತೆ ಮಾಡಿಕೊಂಡಿದ್ದಾರೆ.

ದಾವಾ ಐಟಂ ನಂ. **5** ರ ಸರ್ವೆ ನಂ. **21/102** ಸ್ವತ್ತು ಪ್ರತಿವಾದಿಯವರ ತಾಯಿ ಪುಟ್ಟಗೌರಮ್ಮನವರಿಗೆ ದಿಃ **30.09.1994** ರಲ್ಲಿ ಸರ್ಕಾರದಿಂದ ಮಂಜೂರಾಗಿದೆ ಎಂದರೆ ಒಟ್ಟು ಕುಟುಂಬದ ಪರವಾಗಿ ಮಂಜೂರಾಗಿದೆ. ಈ ರೀತಿ ಒಟ್ಟು ಕುಟುಂಬದ ಪರವಾಗಿ ಆಗಿದೆ ಎಂದು ತೋರಿಸಲು ವಾದಿಯವರು ಅದರ ವಿರುದ್ಧ ಯಾವುದೆ ಅಪೀಲು ಸಲ್ಲಿಸಿಲ್ಲ. ಸದರಿ ಜಮೀನಿನ ಬಗ್ಗೆ ದಿಃ **16.07.1999** ರಂದು ಹೆಚ್.ಡಿ.ಕೋಟೆ ತಾಲ್ಲೂಕಿನ ತಹಸೀಲ್ದಾರರು ಪುಟ್ಟಗೌರಮ್ಮನವರಿಗೆ ಸಾಗೋಳಿ ಚೀಟಿ ಕೊಟ್ಟಿದ್ದಾರೆ ಎಂದರೆ ಒಟ್ಟು ಕುಟುಂಬದಲ್ಲಿ ಇದ್ದಾಗ ಕೊಟ್ಟಿದ್ದಾರೆ. ಪುಟ್ಟಗೌರಮ್ಮ ನವರು ಸದರಿ ಜಮೀನಿನ ಮಂಜೂರಾತಿ ಸಂಬಂಧಪಟ್ಟಂತೆ **535** ರೂ. ಖಿಮ್ಮತ್ತನ್ನು ಕೂಡ ಕಟ್ಟಿದ್ದಾರೆ ಎಂದರೆ ಸಾಕ್ಷಿ ಪುನಃ ಒಟ್ಟು ಕುಟುಂಬದಲ್ಲಿ ಇದ್ದಾಗ ಕಟ್ಟಿದ್ದಾರೆ ಎನ್ನುತ್ತಾರೆ.

ನನಗೆ ಯಲಚನಹಳ್ಳಿಯ ಸರ್ವೆ ನಂ. **38/1** ರಲ್ಲಿ **6** ಎಕರೆ **16** ಗುಂಟೆ ಜಮೀನಿದೆ. ನಾನೇನು ವ್ಯವಸಾಯ ಮಾಡುವುದಿಲ್ಲ ಎಂದರೆ ಸರಿಯಲ್ಲ. ಸುಮಾರು **35** ವರ್ಷಗಳ ಹಿಂದೆ ನಾನು ಐಟಂ ನಂ. **5** ರಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದೆ ಅದರ ನಿಖರ ದಿನಾಂಕ ಮತ್ತು ಸಮಯ ನನಗೆ ಗೊತ್ತಿಲ್ಲ. ನನ್ನ ದಾವಾ ಐಟಂ ನಂ. **5** ರಲ್ಲಿ ಕೆಲಸ ಮಾಡಿರುವುದನ್ನು ನೊಡಿದವರು ಇದ್ದಾರೊ ಇಲ್ಲವೋ ಎಂಬುದು ನನಗೆ ಹೇಳಲಾಗುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಪಂಚಾಯಿತಿಯನ್ನು ಯಾವ ವರ್ಷ,ತಿಂಗಳು ದಿನಾಂಕದಂದು ಮಾಡಲಾಯಿತು ಎಂದು ಹೇಳಲಾಗುವುದಿಲ್ಲ. ಅದು ಈಗ್ಗೆ ಮೂರುವರೆ ವರ್ಷಗಳ ಹಿಂದೆ ನಡೆದಿತ್ತು ಎಂದು ಸ್ವಯಂ ನುಡಿಯುತ್ತಾರೆ. ಪ್ರತಿವಾದಿಗಳ ತಾತ ಚಿಕ್ಕಬೈರಯ್ಯನವರಿಗೆ ಸೋನಹಳ್ಳಿ ಗ್ರಾಮ ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು ಸರ್ವೆ ನಂ. **47/36** ರಲ್ಲಿ **1** ಎಕರೆ ಗದ್ದೆ ಇದೆ ಎಂದರೆ ಸರಿ. ಸದರಿ ಜಮೀನಿನನ್ನು ಈ ದಾವಾದಲ್ಲಿ ಸೇರಿಸಿರುವುದಿಲ್ಲ. ಸದರಿ ಜಮೀನಿನಲ್ಲೂ ಭಾಗ ಕೊಡಿ ಎಂದು ಪಂಚಾಯಿತಿಯಲ್ಲಿ ಕೇಳಲಿಲ್ಲ ಎಕೆಂದರೆ ವಾದಿಯವರು ಮತ್ತು ಅವರ ಚಿಕ್ಕಪ್ಪಂದಿರಾದ ದೊಡ್ಡ ಸಿದ್ದಯ್ಯ ಮತ್ತು ಕುಳ್ಳಬೋರಯ್ಯ ರವರೆ ವ್ಯವಸಾಯ ಮಾಡುತ್ತಿದ್ದಾರೆ.

ಯಲಚನಹಳ್ಳಿ ಗ್ರಾಮದಲ್ಲಿ ಪ್ರತಿವಾದಿಯವರ ತಂದೆ ಸಿದ್ದಯ್ಯನವರಿಗೆ ಮನೆ ಇತ್ತು ಎಂದರೆ ಸರಿ. ಸದರಿ ಮನೆ ಬಗ್ಗೆ ಪಂಚಾಯಿತಿ ಮಾಡಿಲ್ಲ ಮತ್ತು ಈ ದಾವೆಯಲ್ಲಿ ಸೇರಿಸಿಲ್ಲ, ಆ ಮನೆಯಲ್ಲಿ ವಾದಿಯವರಿಗೆ ಸ್ವಾಧೀನದಲ್ಲಿದ್ದಾರೆ ಆದ್ದರಿಂದ ಸೇರಿಸಿಲ್ಲ ಎನ್ನುತ್ತಾರೆ. ಸದರಿ ಮನೆಯ ಬಗ್ಗೆ ದಾಖಲಾತಿಗಳು ಇವೆ ಅದನ್ನು ನಾನು ಪರಿಶೀಲಿಸಿಲ್ಲ. ನಾನು ಹೇಳಿದಂತೆ ಯಾವುದೆ ಪಂಚಾಯಿತಿ ಮಾಡಿಲ್ಲ ನಾನು ಇದೇ ಮೊದಲ ಬಾರಿ ವಾದಿಗಳ ಪರವಾಗಿ ಬಂದು ಈಗ ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **2** ನೇ ಪ್ರತಿವಾದಿ ದೇವಸ್ಥಾನಕ್ಕೆ ಓಡಾಡಲು ತಮ್ಮ ಜಮೀನಿನಲ್ಲಿ ದಾರಿ ಬಿಟ್ಟು ಕೊಟ್ಟಿದ್ದಾರೆಂದು ಅವರ ಪರವಾಗಿ ಗ್ರಾಮಸ್ಥರೆಲ್ಲಾ ಇರುವ ಕಾರಣ ನಾನು **2** ನೇ ಪ್ರತಿವಾದಿ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪಿ.ಡಬ್ಲ್ಯೂ **3**

ಸಿದ್ದಲಿಂಗೇಸ್ವಾಮಿಯವರು ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಲಪಟಾಯಿಸುವ ಸಲುವಾಗಿ ವಾದಿಯವರಿಂದ ಈ ದಾವೆಯನ್ನು ಹೊಡಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ತಂದೆ ಸಿದ್ದಯ್ಯನವರಿಗೆ ಪುಟ್ಟಗೌರಮ್ಮ ಹೊರತು ಪಡಿಸಿ ಇನ್ನಾರು ಹೆಂಡತಿ ಮತ್ತು ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ 1 ಮತ್ತು 3 ರವರ ಪರ ವಕೀಲರು ಮೇಲ್ಕಂಡ 2 ನೇ ಪ್ರತಿವಾದಿ ಪರ ಪಾಟೀ ಸವಾಲನ್ನು ಅನುಮೋದಿಸಿ, ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.